ಎಂ ವಿ ಸಿ ಸಂಖ್ಯೆ 823/2023

ಆರ್ ಡಬ್ಲ್ಯೂ-1

**(ದಿನಾಂಕ 06.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಮುಖ್ಯ ವಿಚಾರಣೆ 3 ನೇ ಎದುರುದಾರರ ಪರ ಶ್ರೀ ವಿ ಜಿ ಪಿ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ ಮತ್ತು ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ.

ಅಥರೈಜೇಶನ್ ಪತ್ರವನ್ನು ನಿ ಆರ್ 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಬಿ ಜಿ ಬಿ ವಕೀಲರಿಂದಃ-**

ಈ ಪರಕರಣಕ್ಕೆ ಸಂಬಂಧಿಸಿದ ಪೋಲೀಸ ದಾಖಲೆಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. ನಿಂಗಪ್ಪ ಬಸ್ಸ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಅಂತಾ ಪೋಲೀಸರು ದೋಷರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ದೋಷಾರೋಪಣ ಪಟಿಪ್ಪಿಯನ್ನು ನಾವು ಪ್ರಶ್ನೆ ಮಾಡಿರುವುದಿಲ್ಲಾ ಎಂದರೆ ಸರಿ. ಅರ್ಜಿದಾರರಿಗೆ ಮಧ್ಯಂತರ ಪರಿಹಾರ ನಾನು ಕೊಟ್ಟಿರುವುದಿಲ್ಲಾ ಎಂದರೆ ಸರಿ. ನಾವು ಪ್ರತಿಪ್ರಯಾಣಿಕರಿಗೂ ಇನ್ಸೂರೆನ್ಸ ಹಣ ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಮಧ್ಯಂತರ ಪರಿಹಾರ ಹಣ ನಮಗೆ ಪಡೆದುಕೊಳ್ಳಲು ಅವಕಾಶ ಇದೆ ಎಂದರೆ ಸರಿ. ಈ ಪ್ರಕರಣದಲ್ಲಿ 16 ಕುರಿ 1 ಮೇಕೆ ಮರಣ ಹೊಂದಿದ್ದು 10 ಕುರಿಗಳು ಗಂಭೀರಗಾಯಕ್ಕೆ ಒಳಗಾಗಿದೆ. ನಂತರದಲ್ಲಿ ಎಷ್ಟು ಪ್ರಾಣಿಗಳು ಸತ್ತವು ಅಂತಾ ನನಗೆ ಮಾಹಿತಿ ಇಲ್ಲಾ ಎಂದರೆ ಸರಿ. ಅರ್ಜಿದಾರರಿಗೆ ಸಂಬಂಧಿಸಿದ ಒಟ್ಟು 18 ಕುರಿ 1 ಮೇಕೆ ಸತ್ತಿರುತ್ತದೆ ಎಂದರೆ ಇರಬಹುದು. ಕುರಿಕಾಯುವವರು ಸರಿಯಾಗಿ ರಸ್ತೆ ನಿಯಮ ಪಾಲಿಸಿರುವುದಿಲ್ಲಾ ಅಂತಾ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಿಂಗಪ್ಪನನ್ನು ಅಮಾನತ್ತು ಗೊಳಿಸಿರುತ್ತೇವೆ ಎಂದರೆ ಆತನು ಗೈರು ಹಾಜರಾದ ಕಾರಣ ಆತನನ್ನು ವಜಾ ಗೊಳಿಸಿರುತ್ತೇವೆ. ಅರ್ಜಿದಾರರಿಗೆ ಪರಿಹಾರ ಕೊಡಲು ನಾವೇ

ಬಾಧ್ಯಸ್ಥರು ಎಂದರೆ ಸರಿಯಲ್ಲ. ಕುರಿ ಮತ್ತು ಮೇಕೆ ಗಳ ವಿವರವನ್ನು ಹೇಳಲು ನಾನು ತಜ್ಞನಲ್ಲಾ ಎಂದರೆ ಸರಿ. ಪಶುವೈದ್ಯಾಧಿಕಾರಿ ಅದನ್ನು ಹೇಳಬೇಕು ಎಂದರೆ ಸರಿ. ಅರ್ಜಿದಾರರಿಗೆ ಪರಿಹಾರ ಧನ ಕೊಡಲು ನಾವು ಬಾಧ್ಯಸ್ಥರು ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಹೊಣೆಗಾರಿಕೆ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ:-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಧೀಶರು, ಹರಪನಹಳ್ಳಿ.